(ಈ ಹಂತದಲ್ಲಿ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ: ಸದನಕ್ಕೆ ಕಿಂಚಿತ್ತು ಗೌರವ ಕೊಟ್ಟಿಲ್ಲ. ಜನತಂತ್ರ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲ. ಸದನಕ್ಕೆ ಅಪಪ್ರಚಾರ ಮಾಡುತ್ತಿದ್ದಾರೆ. ಅಧಿಕಾರಿಗಳ ಗ್ಯಾಲರಿ ಖಾಲಿ ಇದೆ, ಒಬ್ಬರು ಮಂತ್ರಿಗಳು ಇಲ್ಲ, ಹೀಗಾಗಿ ಇದನ್ನು ನಾವು ಖಂಡಿಸುತ್ತೇವೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ: ಮೂರು ಜನ ಮಂತ್ರಿಗಳು ಇದ್ದಾರಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ: ಕರ್ನಾಟಕದ ಜನಕ್ಕೆ ಸರ್ಕಾರ ಅಪಮಾನ ಮಾಡುತ್ತಿದೆ. ಹೀಗಾಗಿ ನಾವು ಎಲ್ಲಾ ಕೂಡ ಪ್ರತಿಭಟಿಸುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಜೆಡಿ(ಎಸ್) ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಆರ್. ನರೇಂದ್ರ: ಮೂರು ಜನ ಸಚಿವರು ಇದ್ದಾರೆ, ಉತ್ತರ ಕೊಡುತ್ತಾರೆ, ಇದನ್ನೇ ರಾಜಕೀಯ ಮಾಡಿಕೊಂಡು ಹೋದರೆ ಏನು ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು: ರಾಜೀವ್ ರವರು ನೀವು ಮಾತನಾಡಿ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಿ.

ಶ್ರೀ ಪಿ. ರಾಜೀವ್ (ಕುಡಚಿ): ಅಲ್ಲ ಕೋರಂ ಇದೆಯೆ?

(ಗೊಂದಲ)